ಆ) ಒಂದೇ ಕುಟುಂಬದ ಸರ್ಕಾರಿ ನೌಕರರಾದ ಗಂಡ, ಹೆಂಡತಿ ಮತ್ತು ಕುಟುಂಬದ ಸದಸ್ಯರು ಒಂದೇ ಮನೆಯಲ್ಲಿ ವಾಸವಾಗಿದ್ದರೂ ಸಹ ಅವರಿಗೆಲ್ಲರಿಗೂ ಮನೆ ಬಾಡಿಗೆ ಭತ್ಯೆ ನೀಡಲಾಗುತ್ತಿದ್ದುದು ನಿಜವೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

ಆ) ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 67 ಎಸ್‌ಆರ್‌ಪಿ 89 ದಿನಾಂಕ 4-5-1990ರ ಕಂಡಿಕೆ ಸಂ 34ರ ಮೇರೆಗೆ ಒಬ್ಬ ಸರ್ಕಾರಿ ನೌಕರನು-ಳು ತಿಂಗಳಿಗೆ ರೂ. 2525.00 ಅಥವಾ ಅದಕ್ಕಿಂತ ಹೆಚ್ಚು ಮೂಲ ವೇತನ ಪಡೆಯುತ್ತಿದ್ದು, ಅವನ:ಳ ಪತ್ನಿ ಗಂಡ ರಾಜ್ಯ ಸರ್ಕಾರ; ಕೇಂದ್ರ ಸರ್ಕಾರ ಕೇಂದ್ರ ಅಥವಾ ರಾಜ್ಯ ಸಾರ್ವಜನಿಕ ಉದ್ಯಮಗಳು ಸ್ಥಳೀಯ ಸಂಸ್ಥೆಗಳು: ಅರೆ ಸರ್ಕಾರಿ ಸಂಸ್ಥೆಗಳು; ಅರೆ ಸರ್ಕಾರಿ ಸಂಸ್ಥೆಗಳು; ಅನುದಾನ ಪಡೆಯುವ ಸಂಸ್ಥೆಗಳು ; ಸಹಕಾರ ಸಂಘಗಳ ನೌಕರನಾಗಿದ್ದು ತಿಂಗಳಿಗೆ ರೂ. 2525.00 ಅಥವಾ ಅದಕ್ಕಿಂತ ಹೆಚ್ಚು ಮೂಲ ವೇತನ ಪಡೆಯುತ್ತಿರುವ ಸಂದರ್ಭದಲ್ಲಿ, ಅವರಲ್ಲೊಬ್ಬರಿಗೆ ಕೊಡಬಹುದಾದಂಥ ಮನೆ ಬಾಡಿಗೆ ಭತ್ಯೆಯನ್ನು ತಿಂಗಳಿಗೆ ರೂ. 2525.00 ಮೂಲ ವೇತನದ ಮೇಲೆ ದೊರೆಯಬಹುದಾದಷ್ಟು ಮೊತ್ತಕ್ಕೆ ಪರಿಮಿತಿಗೊಳಿಸತಕ್ಕದ್ದು. ದಂಪತಿಗಳಲ್ಲಿ ಇನ್ನೊಬ್ಬರು ಗೊತ್ತುಪಡಿಸಲಾದ ದರಗಳಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಪಡೆಯಲು ಅರ್ಹರಾಗಿರತಕ್ಕುದು.

ಸಾಧನೆಯ ಸಮಾವೇಶಕ್ಕೆ ವೆಚ್ಚ ಮಾಡಿರುವ ಮೊತ್ತ

82 - ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗಾ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ 17.10.92ರಂದು ನಡೆದ ಸರ್ಕಾರದ ಸಾಧನೆಯ ಸಮಾವೇಶಕ್ಕೆ ವೆಚ್ಚ ಮಾಡಿದ ಮೊತ್ತವೆಷ್ಟು? (ಇಲಾಖಾವಾರು ಖರ್ಚುಗಳ ಮಾಹಿತಿ ನೀಡುವುದು)?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1,72,74,436.27 (ಇಲಾಖಾವಾರು ವೆಚ್ಚದ ಮಾಹಿತಿಯನ್ನು ಲಗತ್ತಿಸಲಾಗಿದೆ.)

ವಿಧಾನಸಭಾ ಸದಸ್ಯರಾದ ಶ್ರೀ ಬಸವರಾಜರಾಯರೆಡ್ಡಿಯವರ ಚುಕ್ಕೆ ಗುರುತಿನ ಪ್ರಶ್ನೆ 82ಕ್ಕೆ ಸಂಬಂಧಿಸಿದಂತೆ ದಿನಾಂಕ 17.10.92ರ ಸಾಧನೆಯ ಸಮಾವೇಶದ ಇಲಾಖಾವಾರು ವೆಚ್ಚದ ಪಟ್ಟಿ

ಇಲಾಖೆಗಳು	ರೂಪಾಯಿಗಳು
1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	36,450.00
2. ಸಮಾಜಕಲ್ಯಾಣ ಮತ್ತು ಕಾರ್ಮಿಕ ಇಲಾಖೆ	52,500.00
3. ನೀರಾವರಿ ಇಲಾಖೆ	1.02,058-00
4. ಪಶುಸಂಗೋಪನೆ, ಮೀನುಗಾರಿಕೆ ಮತ್ತು ಅರಣ್ಯ ಇಲಾಖೆ	62,442.00

5. ಒಳಾಡಳಿತ ಇಲಾಖೆ	6,98,950.00
6. ಇಂಧನ ಇಲಾಖೆ	1,11,241.27
7. ಕಂದಾಯ ಇಲಾಖೆ	49.000.00
8. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	1,24,350.00
9. ಶಿಕ್ಷಣ ಇಲಾಖೆ	50,000.00
10. ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನಸೇವಾ ಇಲಾಖೆ	1,13,53,774.00
11. ಲೋಕೋಪಯೋಗಿ ಇಲಾಖೆ	44,99,671.00
12. ಆಹಾರ ಮತ್ತು ಸಾರಿಗೆ ಇಲಾಖೆ	49,500.00
13. ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ	35,000.00
14. ಕೃಷಿ ಮತ್ತು ತೋಟಗಾರಿಕೆ ಇಲಾಖೆ	49,500.00
ಒಟ್ಟು	**1,72,74,436.27**

ಹೈದರಾಬಾದ್ - ಕರ್ನಾಟಕ ಅಭಿವೃದ್ಧಿ ಯೋಜನೆಗೆ ಬಿಡುಗಡೆಯಾದ ಹಣ

282 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜೇರಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೈದರಾಬಾದ್ ಕರ್ನಾಟಕ ಯೋಜನೆ ಅಭಿವೃದ್ಧಿ ಯೋಜನೆಗಾಗಿ ಕಳೆದೆರಡು ವರ್ಷಗಳಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ? (ವರ್ಷವಾರು ವಿವರಗಳನ್ನು ನೀಡುವುದು)

ಆ) ಈ ಅವಧಿಯಲ್ಲಿ ಬಿಡುಗಡೆ ಮಾಡಲಾದ ಹಣವನ್ನು ಪೂರ್ಣವಾಗಿ ಖರ್ಚು ಮಾಡಲಾಗಿದೆಯೇ?

ಇ) ಈ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಈ ವರ್ಷ ಕೈಗೊಂಡಿರುವ ಕಾಮಗಾರಿಗಳ ವಿವರಗಳೇನು? (ತಾಲ್ಲೂಕುವಾರು ವಿವರಗಳನ್ನು ನೀಡುವುದು)?

ಈ) ಈ ಕಾಮಗಾರಿಗಳು ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ಕ್ಷಿಪ್ರಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ವರ್ಷವಾರು ಬಿಡುಗಡೆಯಾದ ಹಣ ಕೆಳಗಿನಂತಿದೆ

(ಕೋಟಿ ರೂ.ಗಳಲ್ಲಿ)

ವರ್ಷ	*ಬಿಡುಗಡೆಯಾದ ಹಣ*
1989-90	0.10
1990-91	50.00
1991-92	60.00
1992-93	25.00
(ನವೆಂಬರ್ 92ರ ಅಂತ್ಯದವರೆಗೆ)	
ಒಟ್ಟು	**135.00**